ಹೊರತುಪಡಿಸಿ ಬೇರೆ ಯಾವ ರಾಜ್ಯಗಳಲ್ಲೂ ನಾಯಿಕಡಿತದಿಂದಾಗುವ ರೇಬಿಸ್ ಬಗ್ಗೆ ಮುತುವರ್ಜಿ ವಹಿಸಿಲ್ಲ ಎಂಬ ಅಂಶ ಕೇಂದ್ರ ಸರ್ಕಾರದ ಅಧೀನದ 'ಎನ್‌ಸಿಡಿಸಿ' (ನ್ಯಾಷನಲ್ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್) 2021ರ ವರದಿಯಲ್ಲಿ ದಾಖಲಾಗಿದೆ.

ಸರ್ಕಾರಿ ಲೆಕ್ಕಾಚಾರದಲ್ಲಿ ಎದ್ದುಕಾಣುವ ಕೆಲವು ಅಪಸವ್ಯಗಳಿವೆ. ಅದರ ಪ್ರಕಾರ, 2021ರಲ್ಲಿ ರೇಬಿಸ್‌ನಿಂದ ಸತ್ತವರ ಸಂಖ್ಯೆ ಕೇವಲ 55. ಸಂಶೋಧನಾ ವರದಿಯೊಂದರ ಪ್ರಕಾರ ಅದು 20000. ವಿಶ್ವದ ಒಟ್ಟು ರೇಬಿಸ್ ಪ್ರಕರಣಗಳಲ್ಲಿ ಮೂರನೇ ಒಂದು ಭಾಗ ನಮ್ಮ ದೇಶದ್ದೇ ಆಗಿವೆ. ನಾಯಿ ಕಚ್ಚಿಸಿಕೊಂಡ ನಂತರ ವ್ಯಾಕ್ಸಿನ್ ಹಾಕಿಸಿಕೊಂಡವರ ಚಿಕಿತ್ಸೆ, ಆರೈಕೆ ಹೇಗೆ ಎಂಬ ಬಗ್ಗೆಯೂ ಸರಿಯಾದ ಜ್ಞಾನವಿಲ್ಲ. ಪ್ರಕರಣಗಳ ಸಂಖ್ಯೆ ಭಯ ಹುಟ್ಟಿಸುವಷ್ಟು ಜಾಸ್ತಿ ಇದ್ದರೂ ಅವುಗಳನ್ನು ತಡೆಗಟ್ಟುವ ಸಾರ್ವಜನಿಕ ತಿಳಿವಳಿಕೆ ಅಗತ್ಯ ಪ್ರಮಾಣದಲ್ಲಿಲ್ಲ. ಹೀಗೇ ಮುಂದುವರೆದರೆ ಭಾರತ ರೇಬಿಸ್ ವೈರಸ್‌ನ ರಾಜಧಾನಿಯಾಗುವ ದಿನ ದೂರವಿಲ್ಲ ಎನ್ನುವ ತಜ್ಞರು, ಜನ ಹಾಗೂ ಪ್ರಾಣಿಗಳೆರಡನ್ನೂ ಸುರಕ್ಷಿತವಾಗಿಡಲು ಹಲವು ಕಾನೂನು–ಕಾಯಿದೆಗಳಿದ್ದರೂ ಅವು ಪಾಲನೆಯಾಗುತ್ತಿಲ್ಲ ಎನ್ನುತ್ತಾರೆ.

## ಜನ ಏನಂತಾರೆ?

2022ರ ಅಕ್ಟೋಬರ್‌ನಲ್ಲಿ ಬೃಹತ್ ನಗರಗಳ ಹಲವು ಬಡಾವಣೆಗಳಲ್ಲಿ ಬೀದಿನಾಯಿ ದಾಳಿಯ ಬಗ್ಗೆ ಸಮೀಕ್ಷೆ ಮಾಡಲಾಯಿತು. ಆ ಸಮೀಕ್ಷೆಯಲ್ಲಿ, ಶೇ. 60ರಷ್ಟು ಜನ ಬೀದಿನಾಯಿಗಳ ಕಡಿತ ಪ್ರಕರಣಗಳ ಸಂಖ್ಯೆ ಏರಿಕೆಯಾಯಿತು.

ಕಳೆದ ಮೇ 10ರಂದು ದೆಹಲಿಯಲ್ಲಿ ಬಿಜೆಪಿ ನಾಯಕ ವಿಜಯ್ ಗೋಯಲ್ ನಾಗರಿಕರ ಸಭೆ ಕರೆದಿದ್ದರು. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ 500ಕ್ಕೂ ಹೆಚ್ಚು ಜನ ಆ ಸಭೆಯಲ್ಲಿ ಭಾಗವಹಿಸಿದ್ದರು. ಹಲವರು ಬೀದಿ ನಾಯಿಗಳ ಹಾವಳಿ ಬಗ್ಗೆ ಒಕ್ಕೊರಲಿನಿಂದ ದೂರಿದ್ದಕ್ಕೆ, ಸಭೆಯಲ್ಲಿದ್ದ ಕೆಲವರು ಪ್ರಾಣಿದಯಾ ಸಂಘದವರಿಗೆ ಫೋನ್ ಕರೆ ಮಾಡಿ ಸುದ್ದಿ ಮುಟ್ಟಿಸಿದರು. ಅವರು ಸಭೆಗೆ ನುಗ್ಗಿ ದಾಂಧಲೆ ಎಬ್ಬಿಸಿದರು. ಅಲ್ಲಿ ಗದ್ದಲವಾಗಿ ಸಭೆ ಬರಖಾಸ್ತುಗೊಂಡಿತು.

## ಅನ್ನ-ವಸ್ತ್ರದಿಂದ ಅನಾಹುತ

ನಮ್ಮಲ್ಲಿ ಬಳಸಿ ಉಳಿದ ಆಹಾರವನ್ನು ಪ್ರಾಣಿ ಪಕ್ಷಿಗಳಿಗೆ, ಭಿಕ್ಷುಕರಿಗೆ ನೀಡುವುದು ಅನಾದಿಯಿಂದಲೂ ನಡೆದು ಬಂದಿರುವ ಜೀವನಕ್ರಮ. ಕವಿ ಕಾಳಿದಾಸನ 'ಮೃಚ್ಛಕಟಿಕ'ದಲ್ಲೂ ಮನುಷ್ಯ ತಾನು ತಿನ್ನುಣ್ಣುವ ಆಹಾರದ ಸ್ವಲ್ಪ ಭಾಗವನ್ನು ಪ್ರಾಣಿಗಳಿಗೆ ನೀಡಬೇಕೆಂಬ ಉಲ್ಲೇಖವಿದೆ. ಅದಷ್ಟೇ ಆಗಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಈಗ ಆಹಾರದ ಜೊತೆ ನೀರು, ಕಂಬಳಿ ನೀಡುವುದು ಹೆಚ್ಚಾಗುತ್ತಿದೆ. ಜನ ಬೀದಿನಾಯಿಗಳನ್ನು ಸೂರಿಲ್ಲದ ನಿರಾಶ್ರಿತರಂತೆ ಪರಿಗಣಿಸಿ ಸಹಾಯಕ್ಕೆ ಮುಂದಾಗುತ್ತಿದ್ದಾರೆ.

ಆಹಾರ–ಆಶ್ರಯ ಎರಡನ್ನೂ ಪಡೆಯುತ್ತಿರುವ ಬೀದಿನಾಯಿಗಳಿಗೆ ಒಂದೊಮ್ಮೆ ಅದು ದೊರೆಯದಾದಾಗ ಅವು ಆಕ್ರಮಣಕಾರಿಯಾಗಿಬಿಡುತ್ತವೆ ಎನ್ನುವ ಕೋಲ್ಕತ್ತದ ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ವಿಜ್ಞಾನಿ ಅನಿಂದಿತಾ ಭದ್ರ, 'ನಾಯಿಗಳು ಸರಹದ್ದಿನಲ್ಲಿ ಬದುಕುವ ಪ್ರಾಣಿಗಳು. ತಾವಿರುವಲ್ಲಿಯೇ 'ಆಹಾರ–ಆಶ್ರಯ' ಸಿಕ್ಕಾಗ ಅವು ತಮ್ಮ ಜಾಗದ ಬಗ್ಗೆ ಮತ್ತಷ್ಟು ರಕ್ಷಣಾತ್ಮಕವಾಗಿ ವರ್ತಿಸುತ್ತವೆ. ಯಾರಾದರೂ ಕಲ್ಲೆಸೆದೋ ದೊಣ್ಣೆ ಬೀಸಿಯೋ ಅಥವಾ ಏರುದನಿಯಲ್ಲಿ ಓಡಿಸಲು ಪ್ರಯತ್ನಿಸಿದರೆ ಅವರ ಮೇಲೆ ಆಕ್ರಮಣಕ್ಕಿಳಿದು ಬಿಡುತ್ತವೆ' ಎನ್ನುತ್ತಾರೆ.

ಮುಕ್ತವಾಗಿ ಅಂಡಲೆಯುವ ನಾಯಿಗಳಿಂದ ನಾಗರಿಕರು, ಅದರಲ್ಲೂ ಎಳೆಯ ಮಕ್ಕಳಿಗೆ ತುಂಬಾ ಅಪಾಯವಿದೆ. ಸಂಖ್ಯೆಯಲ್ಲಿ ಹೆಚ್ಚಾಗಿರುವುದರಿಂದ ರಸ್ತೆಯ ವಾಹನಗಳಿಗೆ ಇದ್ದಕ್ಕಿದ್ದಂತೆ ಅಡ್ಡ ಬಂದು ಅಪಘಾತಗಳಾಗುವುದು, ಪ್ರಾಣ ಹಾನಿಯಾಗುವುದನ್ನು ನಿತ್ಯ ಕಾಣುತ್ತೇವೆ. ಎಷ್ಟೋ ಸಲ ಕೋಳಿ ಮತ್ತು ವನ್ಯಜೀವಿಗಳಾದ ನವಿಲು, ಕಾಡುಬೆಕ್ಕು, ಕಾಡುಕೋಳಿಗಳು ನಾಯಿಗಳ ದಾಳಿಗೆ ತುತ್ತಾಗುತ್ತವೆ. ವಾಹನಾಪಘಾತ ಉಂಟುಮಾಡುವುದರಲ್ಲಿ ನಾಗರಿಕರನ್ನು ಬಿಟ್ಟರೆ, ನಾಯಿಗಳ ಪಾತ್ರ ಎರಡನೆಯ ಸ್ಥಾನದಲ್ಲಿದೆ ಎಂಬ ಮಾಹಿತಿಯನ್ನು ಅನಿಂದಿತಾ ನೀಡುತ್ತಾರೆ.

## ಕಾನೂನು ಏನು ಹೇಳುತ್ತದೆ?

ಪ್ರಾಣಿಗಳ ವಿರುದ್ಧದ ಕ್ರೌರ್ಯ ತಡೆಯಲು ಇರುವ 'ಪ್ರಿವೆನ್ಷನ್ ಆಫ್ ಕ್ರುಯೆಲ್ಟಿ ಟು ಅನಿಮಲ್ಸ್ ಆ್ಯಕ್ಟ್– 1960'ರ ಪ್ರಕಾರ, ಸಾರ್ವಜನಿಕ ಜಾಗಗಳಲ್ಲಿ ಬೀದಿನಾಯಿಗಳು ಇರಕೂಡದು. ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಮುನಿಸಿಪಾಲಿಟಿಗಳ ಕಾಯಿದೆಗಳೂ ಅದನ್ನೇ ಹೇಳುತ್ತವೆ. ಆದರೆ, 2001ರಲ್ಲಿ ಜಾರಿಗೆ ಬಂದ ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯದ 'ಅನಿಮಲ್ ಬರ್ತ್ ಕಂಟ್ರೋಲ್ ರೂಲ್ಸ್' ಮತ್ತು 2023ರ ಪಶು ಸಂಗೋಪನಾ ಸಚಿವಾಲಯದ ಕಾನೂನುಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿಯಮಗಳನ್ನು ಉಲ್ಲಂಘಿಸುತ್ತಿವೆ.

2023ರಲ್ಲಿ ಪ್ರಾಣಿಗಳ ಸಂತಾನ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರಲಾಯಿತು. ಇದರಲ್ಲಿ ನಾಯಿಗಳನ್ನು ಸಾಕುನಾಯಿ ಮತ್ತು ಬೀದಿನಾಯಿ ಎಂದು ವರ್ಗೀಕರಿಸಿ, ಸಾಕುನಾಯಿಗಳಿಗೆ ಲಸಿಕೆ ಹಾಕಿಸುವುದು ಮತ್ತು ಸಂತಾನಹರಣ ಶಸ್ತ್ರಕ್ರಿಯೆ ಮಾಡಿಸುವುದು ಮಾಲೀಕನ ಜವಾಬ್ದಾರಿ ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಬೀದಿನಾಯಿಗಳಿಗೆ ಲಸಿಕೆ ಮತ್ತು ಚಿಕಿತ್ಸೆ ಕೊಡಿಸುವುದು ಸ್ಥಳೀಯ ಆಡಳಿತ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ನಾಯಿಗೆ ರೇಬಿಸ್ ಇದ್ದರೂ ಅದನ್ನು ಕೊಲ್ಲುವಂತಿಲ್ಲ ಅಥವಾ ಅನಾರೋಗ್ಯದಿಂದ ಬಳಲುವ ನಾಯಿಯನ್ನು ಕೊಲ್ಲಲು ಅನುಮತಿಯಿಲ್ಲ. ಬದಲಿಗೆ ರೇಬಿಸ್‌ಯುಕ್ತ ನಾಯಿಯನ್ನು ಹತ್ತು ದಿನಗಳವರೆಗೆ ಪ್ರತ್ಯೇಕವಾಗಿರಿಸಬೇಕು. ಆಗ ಅದು ಸಹಜವಾಗಿ ಸಾವನ್ನಪ್ಪುತ್ತದೆ. ಲಸಿಕೆ ಮತ್ತು ಸಂತಾನಶಕ್ತಿಹರಣಕ್ಕೊಳಪಡಿಸುವ ನಾಯಿಗಳನ್ನು ಅವು ಮೊದಲಿದ್ದ ಜಾಗದಲ್ಲಿಯೇ ಒಯ್ದು ಬಿಡಬೇಕೆಂಬ ನಿಯಮವಿದೆ.



ಬೀದಿ ನಾಯಿಗಳನ್ನು ದತ್ತು ಪಡೆಯುವ ಕಾರ್ಯಕ್ರಮವೊಂದರಲ್ಲಿ ನಾಯಿಗಳೊಂದಿಗೆ ಯುವತಿಯರು. ಫೋಟೊ: ಎಸ್.ಕೆ. ದಿನೇಶ್